# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 901 |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ದೇಸಿ ಹಸುಗಳ ಸಂರಕ್ಷಣೆ ಹಾಗೂ ಉತ್ತೇಜನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ದೇಸಿ ತಳಿಗಳಾದ ಅಮೃತಮಹಲ್, ಹಳ್ಳಿಕಾರ್, ಮಲೆನಾಡು ಗಿಡ್ಡ , ಕೃಷ್ಣಾ ವ್ಯಾಲಿ ಮತ್ತು ಖಿಲಾರ್ ತಳಿಗಳ ಸಂರಕ್ಷಣೆಗಾಗಿ ಮಾತೃ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸದರಿ ಮಾತೃ ಕೇಂದ್ರಗಳಲ್ಲಿ ಜನಿಸಿದ ಉತ್ಕೃಷ್ಟ ಹೋರಿಗಳನ್ನು ಗುಣಮಟ್ಟದ ವೀರ್ಯ ಉತ್ಪಾದನೆ ಉದ್ದೇಶಕ್ಕಾಗಿ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ಪೂರೈಸಿ ಸದರಿ ಹೋರಿಗಳಿಂದ ಸಂಸ್ಕರಿಸಿದ ವೀರ್ಯವನ್ನು ನಳಿಕೆಗಳ ರೂಪದಲ್ಲಿ ರಾಜ್ಯಾದ್ಯಂತ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಶೇಖರಿಸಿ ಕೃತಕಗರ್ಭಧಾರಣೆ ಕಾರ್ಯಕ್ರಮದಲ್ಲಿ ಬಳಸಿಕೊಂಡು ದೇಸಿ ತಳಿಗಳ ಸಂರಕ್ಷಣ ಕಾರ್ಯ ನಿರ್ವಹಣೆಗಾಗಿ ಕೈಗೊಳ್ಳಲಾಗುತ್ತಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>ನಮ್ಮ ದೇಶದ ಇತರೆ ರಾಜ್ಯದ ದೇಸೀ ತಳಿಗಳಾದ ಗಿರ್, ಸಾಹಿವಾಲ್, ದೇವಣಿ ಮತ್ತು ಓಂಗೋಲ್ ತಳಿಗಳ ಮಾತೃ ಕೇಂದ್ರಗಳನ್ನು ಇಲಾಖೆಯ ಕ್ಷೇತ್ರಗಳಲ್ಲಿ ಆರಂಭಿಸಿ, ಸದರಿ ಕೇಂದ್ರದಲ್ಲಿ ಜನಿಸುವ ಉತ್ಕೃಷ್ಟ ಹೋರಿಗಳಿಂದ ವೀರ್ಯ ನಳಿಕೆಗಳನ್ನು ಉತ್ಪಾದಿಸಿ ಇಲಾಖೆಯ ಕೃತಕಗರ್ಭಧಾರಣೆ ಕಾರ್ಯಕ್ರಮದ ಮೂಲಕ ರಾಜ್ಯದ ರೈತರಿಗೆ ಪರಿಚಯಿಸಲು ಅನುವಾಗುವಂತೆ ಸಮಗ್ರ ಗೋ ಸಂಕುಲ ಸಮೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. |
| ಆ | ದೇಸಿ ತಳಿಯ ಹಸುಗಳನ್ನು ಸಬ್ಸಿಡಿ ದರದಲ್ಲಿ ವಿತರಿಸುವ ಆಲೋಚನೆ ಸರ್ಕಾರಕ್ಕಿದೆಯೇ; ಯಾವ ಯಾವ ದೇಸಿ ತಳಿ ಹಸುಗಳಿಗೆ ಯಾವ ದರದಲ್ಲಿ ನಿಗಧಿಪಡಿಸಲಾಗಿದೆ; | ಇಲಾಖೆಯ ಎಲ್ಲಾ ಜಾನುವಾರು ಕ್ಷೇತ್ರಗಳ ಸಾಮರ್ಥ್ಯಕ್ಕೆ ಹೆಚ್ಚುವರಿಯಾಗುವ ಹೆಣ್ಣು ಕರುಗಳನ್ನು / ಕಡಸುಗಳನ್ನು / ಹಸುಗಳನ್ನು "ಅಮೃತ ಸಿರಿ" ಯೋಜನೆ ಎಂಬ ನಾಮಕರಣದೊಂದಿಗೆ ಸದರಿ ತಳಿಗಳಿರುವ ವ್ಯಾಪ್ತಿಯ ಜಿಲ್ಲೆಯ ರೈತರಿಗೆ / ದೇವದಾಸಿಯರಿಗೆ / ವಿಧವೆಯರಿಗೆ / War Widows/ ಶವಸಂಸ್ಕಾರ ಕಾರ್ಮಿಕರಿಗೆ ಪುಸ್ತಕ ಬೆಲೆಯ ಶೇ.25 ರಂತೆ ಷರತ್ತು ಮತ್ತು ನಿಬಂಧನೆಗಳೊಂದಿಗೆ ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆ ಮೂಲಕ ರೈತರು ಹೆಚ್ಚು ದೇಶಿ ತಳಿಯ ಹಸುಗಳ ಸಾಕಾಣಿಕೆ ಕೈಗೊಳ್ಳುವಂತೆ ಇಲಾಖೆಯು ತಳಿ ಸಂರಕ್ಷಣೆಗೆ ಪ್ರೋತ್ಸಾಹಿಸಲಾಗುತ್ತಿದೆ. |
| ಇ | ಆಸಕ್ತ ರೈತರು ದೇಸಿ ತಳಿಗಳನ್ನು ಸಾಕಲು ಹಸುಗಳನ್ನು ಖರೀದಿಸುವುದು ಹೇಗೆ; ದೇಸಿ ಹಸುಗಳು ಎಲ್ಲಿ ದೊರೆಯುತ್ತದೆ; (ವಿವರ ನೀಡುವುದು) | ಆಸಕ್ತ ರೈತರು ಖಾಸಗಿಯಾಗಿ ತಳಿ ಲಭ್ಯವಿರುವ ಸಾಕಾಣೆದಾರರಿಂದ ಖರೀದಿಸಬಹುದು ಹಾಗೂ ಇಲಾಖೆ ಕ್ಷೇತ್ರಗಳಲ್ಲಿ ಲಭ್ಯವಿರುವ ದೇಸಿ ತಳಿ ಗಂಡು ಕರುಗಳನ್ನು ಇಲಾಖೆ ಏರ್ಪಡಿಸುವ ವಾರ್ಷಿಕ ಹರಾಜಿನಲ್ಲಿ ಭಾಗವಹಿಸಿ ಖರೀದಿಸಲು ಅವಕಾಶವಿರುತ್ತದೆ. |
| ಈ | ದೇಸಿ ಹಸುಗಳ ಉತ್ಪನ್ನಗಳ ಮಾರಾಟವನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮ ಹಾಗೂ ಯೋಜನೆಯನ್ನು ಕೈಗೊಳ್ಳಲಿದೆ? | ಪ್ರಸ್ತುತ ಅಂತಹ ಯಾವುದೇ ಯೋಜನೆ ರೂಪಿಸಿರುವುದಿಲ್ಲ. |

**ಇ-ಪಸಂಮೀ 242 ಸಲೆವಿ 2023**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

ಶ್ರೀ ಶಶೀಲ್ ಜಿ ನಮೋಶಿ ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 901ಕ್ಕೆ ಅನುಬಂಧ-1

**2022-23 ನೇ ಸಾಲಿನಲ್ಲಿ ರಾಜ್ಯದಲ್ಲಿ ದೇಶಿ ತಳಿ ಸಂರಕ್ಷಣೆಗಾಗಿ ಪಶುವೈದ್ಯ ಕೇಂದ್ರಗಳಲ್ಲಿ ಕೈಗೊಂಡ ಕೃತಕ ಗರ್ಭಧಾರಣೆ ಮತ್ತು ಜನಿಸಿದ ಕರುಗಳ ವಿವರ**

| ಕ್ರಮ ಸಂಖ್ಯೆ | ದೇಶಿ ತಳಿಗಳು | ಕೃತಕ ಗರ್ಭಧಾರಣಾ ಸಂಖ್ಯೆ | ಜನಿಸಿದ ಕರುಗಳ ಸಂಖ್ಯೆ |
|---|---|---|---|
| 1 | ಹಳ್ಳಿಕಾರ್ (HR) | 210583 | 49086 |
| 2 | ಅಮೃತ್ ಮಹಲ್ (AMR) | 93010 | 22243 |
| 3 | ಖಿಲಾರಿ (KR) | 148652 | 36858 |
| 4 | ದೇವಣಿ (DN) | 30242 | 7569 |
| 5 | ಕೃಷ್ಣ ವ್ಯಾಲಿ (KID) | 933 | 132 |
| 6 | ಇತರೆ ದೇಶಿ ತಳಿಗಳು (ಮಲ್ನಾಡ್ ಗಿಡ್ಡ , ಗಿರ್, ಸಾಹಿವಾಲ್, ಥಾರ್ ಪಾರ್ಕರ್) | 459200 | 3860 |
| **ಒಟ್ಟು** | | **942620** | **119748** |